ಖಂಡ-2

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ: ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ-2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ-1 ಇತ್ಯಾದಿ:

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ. ಖಮರುಲ್ ಇಸ್ಲಾಂ: (ಕಾರ್ಮಿಕ ಸಚಿವರು) ಮಾನ್ಯ ಉಪಾಧ್ಯಕ್ಷರೆ, "2002ನೇ ಸಾಲಿನ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ: "2002ರ ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

(ಆ) ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ 2002

ಪರ್ಯಾಲೋಚನಾ ಪ್ರಸ್ತಾವ

ಶ್ರೀ. ಖಮರುಲ್ ಇಸ್ಲಾಂ: (ಕಾರ್ಮಿಕ ಸಚಿವರು) ಮಾನ್ಯ ಉಪಾಧ್ಯಕ್ಷರೆ, "2002ನೇ ಸಾಲಿನ ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು

ಉಪಾಧ್ಯಕ್ಷರು: ಏನಾದರೂ ವಿವರಣೆ ಕೊಡುವುದು ಇದ್ದರೆ ಮಾನ್ಯ ಮಂತ್ರಿಗಳು ಕೊಡಬಹುದು.

ಶ್ರೀ. ಖಮರುಲ್ ಇಸ್ಲಾಂ: ಮಾನ್ಯ ಉಪಾಧ್ಯಕ್ಷರೆ, This is very small amendment. The Legislature Committee on Women & Child Welfare visited some of the factories. As per the present Factories (Karnataka Amendment) Act, in Section 45 and 49, where there are more than five hundred workers, the Factories shall have a Welfare Officer, Medical Officer and a Supervisor. The Legislature Committee had recommended to the Labour Department that the number should be reduced from 500 to 200, in the larger interests of the welfare of the labourers. Based on

their recommendation, this amendment is before the House and also it has been recommended by the Committee that where there are more than 200 women workers, there should be one Lady Supervisor.I request the House to pass this amendment unanimously.

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಉಪಾಧ್ಯಕ್ಷರೆ, 500ರ ಸಂಖ್ಯೆಯನ್ನು 200ಕ್ಕೆ ತರಬೇಕೆನ್ನುವುದು ಇದರಲ್ಲಿ ಮುಖ್ಯವಾಗಿರುವುದು ಇವರು ಸೂಪರ್‌ವೈಸರ್‌ಗಳನ್ನು ನೇಮಕ ಮಾಡುವಾಗ ಇತ್ಯಾದಿ 200 ಕೆಲಸಗಾರರಿಗಿಂತ ಹೆಚ್ಚು ಜನ ಕೆಲಸ ಮಾಡುವಂಥ ಕಾರ್ಖಾನೆಗಳಾಗಲೀ ಅಥವಾ ಸ್ಥಳಗಳಾಗಲೀ ಅವು ಒಟ್ಟು ಎಷ್ಟಿವೆ? ಹೊಸದಾಗಿ ಎಷ್ಟು ಜನರನ್ನು ನೇಮಕ ಮಾಡಬೇಕಾದ ಅವಶ್ಯಕತೆ ಬರುತ್ತದೆನ್ನುವುದನ್ನು ಸರ್ಕಾರಿ ಏನಾದರೂ ಯೋಜನೆ ಮಾಡಿದೆಯೆ? ಆ ವಿವರಗಳನ್ನು ಕೊಡಬೇಕು.

ಶ್ರೀ. ಕೆ. ಜಯಪ್ರಕಾಶ್ ಹೆಗಡೆ: ಮಾನ್ಯ ಉಪಾಧ್ಯಕ್ಷರೆ, ಡಾಕ್ಟರುಗಳನ್ನು ಏನು ರಿಕ್ರೂಟ್ ಮಾಡುತ್ತಾರೆ ಅವರು ಪಾರ್ಟಿಟೈವರ್ ಡಾಕ್ಟರ್ಸ್ ಅಥವಾ ಫುಲ್‌ಟೈವರ್ ಡಾಕ್ಟರ್ಸ್ ಆಗಿರಬೇಕಾ? ಏಕೆಂದರೆ ಕೆಲಸ ಕಾರ್ಖಾನೆಗಳಲ್ಲಿ 500ಜನ ಅಥವಾ 200ಜನ ಕಾರ್ಮಿಕರು ಇರುತ್ತಾರೆ ಮ್ಯಾನೇಜ್‌ಮೆಂಟ್‌ನವರು ಪಾರ್ಟಿಟೈವರ್ ಆದರೆ ಸ್ವಲ್ಪ ಹಣ ಕೊಟ್ಟು ಇಟ್ಟುಕೊಳ್ಳಲಿಕ್ಕೆ ಎರಡು ಮೂರು ಗಂಟೆ ಇಟ್ಟುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಪರ್ಮನೆಂಟ್ ಡಾಕ್ಟರ್ ಬೆಳಗ್ಗೆಯಿಂದ ಸಾಯಂಕಾಲದವರೆಗೆ ಇಟ್ಟುಕೊಳ್ಳಬೇಕಾಗುತ್ತದೆ by paying higher salary. ಮ್ಯಾನೇಜ್‌ಮೆಂಟ್‌ನವರ ದುಡ್ಡು ಉಳಿಸಲಿಕ್ಕೋಸ್ಕರ ಪಾರ್ಟ್‌ಟೈಮ್ ಡಾಕ್ಟರ್ ಇಟ್ಟುಕೊಳ್ಳುತ್ತಾರೆ. ತಾವೊಂದು ನಿರ್ಧಾರ ಮಾಡಿ ಅವರು ಪರ್ಮನೆಂಟ್ ಡಾಕ್ಟರ್ ಇಟ್ಟುಕೊಳ್ಳಬೇಕಾ, ಪಾರ್ಟ್‌ಟೈಂ ಸಲುವಾಗಿ ಇಟ್ಟುಕೊಳ್ಳಲಿಕ್ಕೆ ಅವಕಾಶ ಇದೆಯಾ ಎಂದು ತಾವು ಹೇಳಬೇಕು.

**SRI QUAMARUL ISLAM:-** Our intention is that the Labour should be given facilities. We thought of their welfare. This provision is to be provided to the Labour. The Legislature Committee has unanimously recommended and the Department after studying their report, they have brought this amendment in the larger interests of the labour.

ಶ್ರೀ. ಅರಗಜ್ಞಾನೇಂದ್ರ: ಮಾನ್ಯ ಉಪಾಧ್ಯಕ್ಷರೆ, ಇದು ಕ್ಲಿಯರ್ ಆಗಲಿಲ್ಲ. ಇದರಲ್ಲಿ ಕ್ಲಾರಿಟಿ ಇಲ್ಲ. ದಯವಿಟ್ಟು ಫುಟ್‌ಟೈಂಗೆ ಹೋಗುತ್ತೀರಾ, ಪಾರ್ಟ್‌ಟೈಂಗೆ ಹೋಗುತ್ತೀರಾ ಎನ್ನುವ ಕನ್‌ಪ್ಯೂಷನ್ ಇದ್ದರೆ ನಾಳೆ ಇವರು ಲೇಬರ್ ಆಫೀಸರ್ ದುಡ್ಡು ಮಾಡಲಿಕ್ಕೆ ಅವಕಾಶವಾಗುತ್ತದೆ. ಭ್ರಷ್ಟಾಚಾರಕ್ಕೆ ಎಡೆಮಾಡಿಕೊಡುತ್ತದೆಯೇ ಹೊರತು ಇದರಿಂದ ಕಾರ್ಖಾನೆ ಮಾಲೀಕನಿಗೂ ಸುಖವಿಲ್ಲ ಅಥವಾ ಅಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೂ ಸುಖವಿಲ್ಲ. ಈ ಒಂದು ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದ್ದರಿಂದ ಇದರಲ್ಲಿ ಒಂದು ಖಚಿತತೆ ಇರಬೇಕಾಗುತ್ತದೆ. ಇದನ್ನು ಸರಿಯಾದ ರೀತಿಯಲ್ಲಿ ಮಾನ್ಯ ಸಚಿವರು ನಮಗೆ ತಿಳಿಸಬೇಕಾಗುತ್ತದೆ.

ಉಪಾಧ್ಯಕ್ಷರು: ಏನಾದರೂ ವಿವರಣೆಯನ್ನು ಮಾನ್ಯ ಮಂತ್ರಿಗಳು ಕೊಡುತ್ತೀರಾ?

ಶ್ರೀ. ವಿಶ್ವೇಶ್ವರ ಹೆಗಡೆ ಕಾಗೇರಿ: ಬೇರೆ ಬೇರೆಯವರು ಅವರಿಗೆ ಸಹಾಯ ಮಾಡಿದ ಹಾಗೆ ದಯವಿಟ್ಟು ಈಗ ಸಹಾಯ ಮಾಡಿ ಇಲ್ಲದಿದ್ದರೆ,

ಶ್ರೀ. ಸಿ.ಆರ್.ಸಗೀರ್ ಅಹಮದ್ (ವಸತಿ ಸಚಿವರು): ನೀವೇ ಎಲ್ಲವನ್ನೂ ತಿಳಿದ ಹಾಗೆ ಮಾತನಾಡಿದರೆ ಹೇಗೆ? ಬೇರೆ ಬೇರೆಯವರು ಸಹಾಯ ಮಾಡುತ್ತಾರೆ ಎಂದು ಹೇಳಿದರೆ ಹೇಗೆ?

(ಗೊಂದಲ)

ಶ್ರೀ. ಎಸ್. ಸುರೇಶ್‌ಕುಮಾರ್: ಮಾನ್ಯ ವಿಶ್ವೇಶ್ವರ ಹೆಗಡೆಯವರು ಹೇಳಿದ್ದು ಸಪೋರ್ಟ್ ಮಾಡಿ ಅಂದದ್ದು ಈ ರೀತಿಯ ಸಪೋರ್ಟ್ ಅಲ್ಲ. ಫುಲ್‌ಟೈಂ ಅಥವಾ ಪಾರ್ಟ್‌ಟೈಂ ನಿಮಗೆ ಏನಾದರೂ ಗೊತ್ತಿದ್ದರೆ ಹೇಳಿ. ಇಲ್ಲದಿದ್ದರೆ ಸುಮ್ಮನೆ ಕುಳಿತುಕೊಳ್ಳಿ.

ಶ್ರೀ. ಸಿ.ಆರ್.ಸಗೀರ್ ಅಹಮದ್: ಅವರು ಹೇಳುತ್ತಾರೆ. ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ. ಎಸ್.ಸುರೇಶ್‌ಕುಮಾರ್: ನಿಮಗೆ ಗೊತ್ತಿದ್ದರೆ ಹೇಳಿ.

**SRI QUAMARUL ISLAM:-** There are about 900 industries where there are more than 200 employees are working. As per the Rules Full Time Doctors are needed. But if Full Time Doctors are not available, naturally they will appoint, Part time Doctors. But as per the Rules, Full Time Doctors are needed.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "2002ನೇ ಸಾಲಿನ ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು)

ಖಂಡ 2ರಿಂದ 3ರವರೆಗೆ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ: "ಖಂಡ 2ರಿಂದ 3ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 3ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಮೊದನೆಯ ಖಂಡ ಇತ್ಯಾದಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ: "ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಧೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಅಂಗೀಕಾರ

ಶ್ರೀ ಖಮರುಲ್ ಇಸ್ಲಾಂ: (ಕಾರ್ಮಿಕ ಸಚಿವರು) ಮಾನ್ಯ ಉಪಾಧ್ಯಕ್ಷರೆ, "2002ನೇ ಸಾಲಿನ ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, "2002ನೇ ಸಾಲಿನ ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು)

**14. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:-**

**ಬೀಮಾನದಿ ಪಾತ್ರಗಳಲ್ಲಿರುವ ನೀರು ಬತ್ತಿ ಹೋಗಿರುವ ಬಗ್ಗೆ ಚರ್ಚೆಗೆ ಅವಕಾಶ**

ಉಪಾಧ್ಯಕ್ಷರು: ಈಗ ಭೀಮಾ ನದಿ ಪಾತ್ರಗಳಲ್ಲೂ ಭೀಮಾ ನದಿಯು ಕಳೆದ ಮೂರು ವರ್ಷಗಳಿಂದ ಮೇಲಿಂದ ಮೇಲೆ ಬತ್ತಲು ಕಾರಣವಾಗಿರುವ ಮಹಾರಾಷ್ಟ್ರ ಸರ್ಕಾರದ ನಿಲುವಿನ ಬಗ್ಗೆ ಹಾಗೂ ರಾಜ್ಯ ಸರ್ಕಾವವು ಸರ್ವೋಚ್ಚ ನ್ಯಾಯಾಲಯದಲ್ಲಿ ನಾನು ಕೈಗೊಳ್ಳುವ ನಿಲುವಿನ ಬಗ್ಗೆ ಸೂಚನೆ ನೀಡಲು ಬಯಸುತ್ತೇನೆ ಹಾಗೂ ಈ ವಿಷಯದ ಬಗ್ಗೆ ಮಾನ್ಯ ಜಲಸಂಪನ್ಮೂಲ ಖಾತೆಯ ಸಚಿವರಲ್ಲಿ ಗಮನ ಸೆಳೆದುಸೂಚಿಸುವ ವಿಷಯ...

ಶ್ರೀ ಎ. ಕೃಷ್ಣಪ್ಪ: ಉಪಾಧ್ಯಕ್ಷರೇ, ಈಗ ಬಿಲ್ಸ್ ತೆಗೆದುಕೊಳ್ಳಬೇಕಾದ್ದು ಇನ್ನೂ ಇದೆ. ಈಗಾಗಲೇ ಟೈಮ್ ಆಗಿದೆ. ನಿನ್ನೆ, ಮೊನ್ನೆ ನಮ್ಮದು ಬಿಲ್ ಬಂದಿಲ್ಲ. ಈಗಾಗಲೇ ಟೈಮ್ ಆಗಿರುವುದರಿಂದ ಇನ್ಯಾವಾಗ ಬಿಲ್ ತೆಗೆದುಕೊಳ್ಳುವುದು. ಈ ವಿಧೇಯಗಳು ಕಾನ್ಸಿಲ್‌ಗೆ ಮತ್ತೆ ಹೋಗಿ ಬರಬೇಕಲ್ಲವೆ?

ಶ್ರೀ. ಪಾಟೀಲ್ ಶಿವಾನಂದ ಸಿದ್ಧರಾಮಗೌಡ: ಕಾಗೋಡು ತಿಮ್ಮಪ್ಪನವರೆ, ಬಿ.ಎ.ಸಿ. ಮಿಾಟಿಂಗ್‌ನಲ್ಲಿ ನೀವೇ ಒಪ್ಪಿಕೊಂಡು ಬಂದಿದ್ದೀರಿ ಭೀಮಾ ನದಿಯ ಬಗ್ಗೆ ಮಾತನಾಡಲು ಅವಕಾಶ ಕೊಡುತ್ತೇವೆಂದು ಹೇಳಿ. ಇಲ್ಲಿ ಈ ರೀತಿ ಮಾತನಾಡಿದರೆ ಏನು ಹೇಳೋದು? ನಿಮ್ಮ ಸಲುವಾಗಿಯೇ ಏಳು ಬಿಲ್ ಪಾಸ್ ಮಾಡಿದ್ದೀವಲ್ಲಾ.

ಶ್ರೀ. ಕಾಗೋಡು ತಿಮ್ಮಪ್ಪ: ಇದು ಒಂದು ಬಹಳ ಮುಖ್ಯವಾದ ಬಿಲ್ ಇದೆ.

ಶ್ರೀ. ಪಾಟೀಲ್ ಶಿವಾನಂದ ಸಿದ್ದರಾಮಗೌಡ: ಇದೂನೂ ಅಷ್ಟೆ ಇಂಪಾರ್ಟೆಂಟ್ ಇಷ್ಟೂ ಇದೆ. ಇದು ಇಂಪಾರ್ಟೆಂಟ್ ಇದೆಯೋ ಇಲ್ಲವೋ ಹೇಳಿ. ನೀವೇ ಹೇಳಿ ಇಂಪಾರ್ಟೆಂಟ್ ಹೌದೋ ಅಲ್ಲವೋ ಎಂದು.

ಶ್ರೀ ಕಾಗೋಡು ತಿಮ್ಮಪ್ಪ : ಇಂಪಾರ್ಟೆಂಟ್ ಇದೆ. ಇಲ್ಲವೆಂದು ಹೇಳುತ್ತಿಲ್ಲ.

ಶ್ರೀ. ವಿಶ್ವೇಶ್ವರ ಹೆಗಡೆ: (ಕಾಗೇರಿ) ಮಾನ್ಯ ಉಪಾಧ್ಯಕ್ಷರೆ, ಇದು ಇಂಪಾರ್ಟೆಂಟ್ ಇದೆಯೆಂದು ತಿಳಿದು ತಾವು ಅವಕಾಶ ಕೊಟ್ಟಿದ್ದೀರಿ. ಈಗ ಶಿವಾನಂದ ಪಾಟೀಲರು ಆ ವಿಷಯದ ಬಗ್ಗೆ ಪ್ರಸ್ತಾಪಿಸುತ್ತಾರೆ.

ಶ್ರೀ. ಎಸ್. ಎಸ್. ಪಾಟೀಲ್: ಸನ್ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು ವಿನಂತಿ. ನೀವು ಪಾಟೀಲರದ್ದು ತೆಗೆದುಕೊಳ್ಳಿ ಮತ್ತು ಅವರದ್ದನ್ನೂ ಕೂಡ ಚರ್ಚೆಗೆ ತೆಗೆದುಕೊಳ್ಳಿ. ನಾನು ಬೇಡವೆಂದು ಹೇಳುವುದಿಲ್ಲ. ಈ ಧೂಮಪಾನ ವಿಧೇಯಕ ಹೋದ ಅಧಿವೇಶನದಿಂದ ಮುಂದು ಹೋಗುತ್ತಿದೆ. ದಯವಿಟ್ಟು ಇದು ಮಹತ್ವದ ವಿಧೇಯಕವಾಗಿದೆ. ಆದಕಾರಣ ಮೊದಲು ಈ ಬಿಲ್‌ನ್ನು ತೆಗೆದುಕೊಂಡು ಆಮೇಲೆ ಅವರ ವಿಚಾರವನ್ನು ತೆಗೆದುಕೊಳ್ಳೋಣ. ಇದೇನೂ ಬಹಳ ಹೊತ್ತಾಗುವುದಿಲ್ಲ.

ಶ್ರೀ. ಪಾಟೀಲ್ ಶಿವಾನಂದ ಸಿದ್ಧರಾಮಗೌಡ: ಭೀಮಾ ನದಿ ವಿಚಾರವೂ ಕೂಡ ಬಹಳ ಇಂಪಾರ್ಟೆಂಟ್ ಇದೆ.